


# ಕಾಲರ್ ಲೆಸ್ ಶರ್ಟ್

*ಈವತ್ತು ನಾವು ಬಟನ್ ಡೌನ್ ಕಾಲರ್ ಇಲ್ಲದ ಶರ್ಟನ್ನು ಸ್ಕ್ರಾಚಿನಿಂದ ಹೇಗೆ ಮಾಡುವುದೆಂದು ಕಲಿಯೋಣ.*



## ವಸ್ತುಗಳ ವಿವರ

2.5 ಅಗಲವಿರುವ 2.5 ಮೀಟರ್ ಮುದ್ರಿತ ಫ್ಯಾಬ್ರಿಕ್
ನಮ್ಮ ವೆಬ್‌ಸೈಟ್ www.ushasew.com ನಿಂದ ನೀವು ಡೌನ್ ಲೋಡ್ ಮಾಡಬಹುದಾದ ಕಾಲರ್‌ಲೆಸ್ ಶರ್ಟ್‌ಗಾಗಿ ಟೆಂಪ್ಲೇಟ್
ಬೀಡೆಡ್ ಪಿನ್ಸ್
ಚಾಲ್ಕ್
ಕತ್ತರಿ
ಮೆಶರಿಂಗ್ ಟೇಪ್
ಮ್ಯಾಚಿಂಗ್ ದಾರ
¼ ಮೀಟರ್ ಕ್ಯಾನ್ವಾಸ್ ಬೆಸೆಯುವಿಕೆ
ಊಷಾ ಜನೋಮ್ ಬಟನ್ ಹೋಲ್ ಫುಟ್
12 ಬಟನ್




ಈ ವೀಡಿಯೋದಲ್ಲಿ ನಾವು ಶರ್ಟಿಗೆ ಬೇಕಾದ ಬೇರೆ ಬೇರೆ ಪೀಸಸನ್ನು ಟೆಂಪ್ಲೇಟಿನಿಂದ ಹೇಗೆ ಕಟ್ ಮಾಡುವುದು, ಶರ್ಟಿನ ಮುಂಭಾಗದ ಪೀಸನ್ನು ತಯಾರಿಸುವುದು, ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಸೇರಿಸುವುದು, ನೆಕ್ ಲೈನನ್ನು ಮುಗಿಸುವುದು, ಸ್ಲೀವ್ ಮತ್ತು ಕಫ್ಸನ್ನು ತಯಾರಿಸಿ ಅದನ್ನು ಶರ್ಟಿಗೆ ಸೇರಿಸುವುದು, ಸೈಡ್ ಸೀಮನ್ನು ಮುಗಿಸುವುದು ಮತ್ತು ಬಾಟಮನ್ನು ಹೆಮ್ ಮಾಡುವುದು ಮತ್ತು ಕೊನೆಯಲ್ಲಿ ಬಟನನ್ನು ಹೊಲೆಯುವುದು.



## ಹಂತ ೧ : ಟೆಂಪ್ಲೇಟಿನಂತೆ ಮಾರ್ಕ್ ಮಾಡಿ ಕಟ್ ಮಾಡುವುದು









ನಿಮಿಷ್ಟದ ಬಟ್ಟೆಯನ್ನು ತೆಗೆದುಕೊಳ್ಳಿ ಬಟ್ಟೆಯನ್ನು ತೆರೆಯಿರಿ ಬಲಭಾಗ ಮೇಲಕ್ಕಿಟ್ಟು ಅರ್ಧಕ್ಕೆ ಉದ್ದವಾಗಿ ಟುಟೋರಿಯಲ್ಲಿನಲ್ಲಿ ತೋರಿಸಿರುವಂತೆ ಮಡಚಿ. ನಂತರ www.ushasew.com ನಿಂದ ಡೌನ್ಲೋಡ್ ಮಾಡಿಕೊಂಡ ಹಿಂಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲೆ ಇಡಿ. ಗಮನವಹಿಸಿಕೊಂಡು ಸೈಡ್ ಎಂದು ಹಾಕಿರುವುದನ್ನು ಸರಿಯಾಗಿಡಬೇಕು. ಫೋಲ್ಡ್ ಎಂದು ಬರೆದಿರುವುದರ ಮೇಲೆ ಫೋಲ್ಡಿನ ಮೇಲೆ. ಅದನ್ನು ಸರಿಯಾಗಿ ಪಿನ್ ಮಾಡಿ. ಪಿನನ್ನು ಬಟ್ಟೆಯ ಎರಡೂ ಪದರಕ್ಕೂ ಪಿನ್ ಮಾಡಿ. ಚಾಲ್ಕನ್ನು ತೆಗೆದುಕೊಂಡು ಟೆಂಪ್ಲೇಟಿನ ಸುತ್ತಲೂ ಟ್ರೇಸ್ ಮಾಡಿ. ಟ್ರೇಸಿಂಗ್ ಮಾಡಿದ ಮೇಲೆ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಅದನ್ನು ಪಕ್ಕಕಿಡಿ. ಈಗ ಕತ್ತರಿಯನ್ನು ತೆಗೆದುಕೊಂಡು ಟ್ರೇಸ್ ಮಾಡಿರುವ ಪ್ಯಾಟರ್ನ್ ಮೇಲೆ ಕತ್ತರಿಸಿ. ನಿಧಾನವಾಗಿ ಮತ್ತು ಸ್ಥಿರವಾಗಿ ಪ್ಯಾಟರ್ನ್ ಸರಿಯಾಗಿ ಕತ್ತರಿಸಿ. ಕರ್ವ್ಸ್‌ಳ ಬಗ್ಗೆ ಹುಷಾರಾಗಿರಿ. ಕಟ್ ಮಾಡಿರುವ ಪೀಸನ್ನು ಪಕ್ಕಕಿಡಿ.


ಈಗ ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಂಡು ಮುಂಭಾಗ ಎಂದಿರುವ ಟೆಂಪ್ಲೇಟಿನ ಮೇಲೆ ಇಡಬೇಕು. ಅದನ್ನು ಒಳಕ್ಕೆ ಮಡಚಿ ಟೆಂಪ್ಲೇಟಿನ ಮುಂಭಾಗ ಎಂದಿರುವುದನ್ನು ಅದರ ಮೇಲಿಡಬೇಕು. ಮುಂಭಾಗ ಎಂದಿರುವ ಟೆಂಪ್ಲೇಟನ್ನು ಮಡಿಕೆಯ ಮೇಲೆ ಇಡುವುದಿಲ್ಲಾ ಏಕೆಂದರೆ ಅದಕ್ಕೆ ಎರಡು ಪೀಸ್ ಇರುತ್ತದೆ. ಹಿಂಭಾಗದ ಟೆಂಪ್ಲೇಟಿನಂತೆ ಮುಂಭಾಗದ ಟೆಂಪ್ಲೇಟನ್ನುಸರುಯಾದ ಜಾಗದಲ್ಲಿ ಬೀಡೆಡ್ ಪಿನ್ ನಿಂದ ಪಿನ್ ಮಾಡಿ ಚಾಲ್ಕನ್ನು ತೆಗೆದುಕೊಂಡು ಮಟೀರಿಯಲನ್ನು ಬಟ್ಟೆಯ ಮೇಲೆ ಟ್ರೇಸ್ ಮಾಡಿ



ಕರ್ವ್ಡ್ ಎಡ್ಜನ್ನು ಗಮನದಲ್ಲಿರಿಸಿ. ಇದಾದ ಮೇಲೆ ಟೆಂಪ್ಲೇಟನ್ನು ಅನ್ ಪಿನ್ ಮಾಡಿ ಪಕ್ಕಕಿಡಿ. ಈಗ ಕತ್ತರಿಯಿಂದ ಟ್ರೇಸ್ ಮಾಡಿರುವ ಟೆಂಪ್ಲೇಟನ್ನ್ ಕತ್ತರಿಸಿ . ಈ ಹಂತದಲ್ಲಿ ಹೆಚ್ಚು ಜಾಗ್ರತೆಯಿಂದಿರಿ ಏಕೆಂದರೆ ಇದು ನಿಮ್ಮ ಪ್ಯಾಟರ್ನನ್ನು ಮಾಡಬಹುದು ಅಥವಾ ಮುರಿಯಬಹುದು. ಇದನ್ನು ಮುಗಿಸಿದ ಮೇಲೆ ಈ ಪೀಸನ್ನೂ ಪಕ್ಕಕಿಡಿ.



















ಈಗ ಮಿಕ್ಕಿರುವ ಬಟ್ಟೆಯಿಂದ ಸ್ಲೀವನ್ನು ಮಾಡೋಣ. ಅದನ್ನ ತೋರಿಸಿರುವಂತೆ ಅರ್ಧಕ್ಕೆ ಮಡಚಿ ಸ್ಲೀವ್ ಟೆಂಪ್ಲೇಟನ್ನು ಬಟ್ಟೆಯ ಮೇಲಿಡಿ.ಬೀಡೆಡ್ ಪಿನ್ ಸಹಾಯದಿಂದ ಬಟ್ಟೆಯನ್ನು ಭದ್ರವಾಗಿ ಪಿನ್ ಮಾಡಿ. ಇದು ಟ್ರೇಸ್ ಮಾಡಲು ಅನುಕೂಲವಾಗುತ್ತದೆ. ಚಾಲ್ಕನ್ನು ತೆಗೆದುಕೊಂಡು ಟೆಂಪ್ಲೇಟನ ಸುತ್ತಲೂ ಪೂರ್ತಿ ಬಟ್ಟೆಯ ಮೇಲೆ ಟ್ರೇಸ್ ಮಾಡಿ.ಕರ್ವ್ಡ್ ಎಡ್ಜಸ್ ಕಡೆ ಗಮನವಿರಲಿ ನಿಧಾನವಾಗಿ ಮತ್ತು ಭದ್ರವಾಗಿ ಟ್ರೇಸ್ ಮಾಡಿ. ಸ್ಲಿಟನ್ನು ಮಾರ್ಕ್ ಮಾಡುವುದನ್ನೂ ಮರೆಯಬೇಡಿ.ಇದಾದ ಮೇಲೆ ಟೆಂಪ್ಲೇಟನ್ನು ಅನ್ ಪಿನ್ ಮಾಡಿ. ಪಿನ್ ಗಳನ್ನು ಅದರ ಜಾಗದಲ್ಲಿ ಹಾಕಿ ಏಕೆಂದರೆ ಗಾಯವಾಗಬಹುದು.ಈಗ ಟ್ರೇಸ್ ಮಾಡಿರುವ ಸ್ಲೀವನ್ನು ಬಟ್ಟೆಯಿಂದ ಕತ್ತರಿಸಿ.ಸ್ಲಿಟನ್ನು ಕತ್ತರಿಸಲೂ ಮರೆಯಬೇಡಿ.ಇದಾದ ಮೇಲೆ ಮಿಕ್ಕಿರುವ ಬಟ್ಟೆಯನ್ನು ತೆಗೆದುಕೊಂಡು ತೋರಿಸಿರುವಂತೆ ಫೇಸಿಂಗ್ ಟೆಂಪ್ಲೇಟನ್ನು ಅದರ ಮೇಲಿಡಬೇಕು.ಎರಡು ಪ್ಲಾಕೆಟ್ ಟೆಂಪ್ಲೇಟನ್ನೂ ಇಡಬೇಕು. ಕಫ್ ಟೆಂಪ್ಲೇಟನ್ನು ನಂತರ ಇಡಬೇಕು ಫೋಲ್ಡ್ ಎಂದು ಬರೆದಿರುವುದರ ಮೇಲೆ ಬಟ್ಟೆಯ ಮಡಚಿರುವ ಭಾಗವನ್ನು ಇಡಬೇಕು. ಈಗ ಎಲ್ಲಾ ಟೆಂಪ್ಲೇಟನ್ನು ಬಟ್ಟೆಯ ಮೇಲೆ  ಪಿನ್ ಮಾಡುವ ಸಮಯ. ಇದು ಟ್ರೇಸ್ ಮಾಡುವಾಗ ಬಟ್ಟೆಯನ್ನು ಭದ್ರವಾಗಿರಿಸುತ್ತದೆ. ಈಗ ಚಾಲ್ಕನ್ನು ತೆಗೆದುಕೊಂಡು ಕಫ್ಫಿನ ಟೆಂಪ್ಲೇಟನ್ನುನಿಧಾನವಾಗಿ ಮತ್ತು ಸ್ಥಿರವಾಗಿ ಟ್ರೇಸ್ ಮಾಡಿ ನಂತರ ಪ್ಲಾಕೆಟನ್ನು ಟ್ರೇಸ್ ಮಾಡಿ.ಕೊನೆಯದಾಗಿ ಫೇಸಿಂಗ್ ಟೆಂಪ್ಲೇಟನ್ನು ಟ್ರೇಸ್ ಮಾಡಿ.ಇದನ್ನು ಮುಗಿಸಿದ ಮೇಲೆ ಕಫ್ ಟೆಂಪ್ಲೇಟನ್ನು ಅನ್ ಪಿನ್  ಮಾಡಿ ಅದನ್ನು ಸೈಡಿನಲ್ಲಿ ಮತ್ತೆ ಪಿನ್ ಮಾಡಿ.ನಮಗೆ ಎರಡು ಕಫ್ ಪೀಸಸ್ ಬೇಕು.ಇದನ್ನೂ ಟ್ರೇಸ್ ಮಾಡಿ.ಈಗ ನಿಧಾನವಾಗಿ ಟೆಂಪ್ಲೇಟ್ ಗಳನ್ನು ಅನ್ಪಿನ್ ಮಾಡಿ ಪಕ್ಕಕ್ಕಿಡಿ.ಕಫ್ಫಿಂದ ಪ್ರಾರಂಭಿಸಿ ಪ್ಲಾಕೆಟ್ಸ್ ಕಡೆಗೆ.ಕರ್ವ್ಡ್ ಎಡ್ಜಸ್ ಕಡೆ ಗಮನವಹಿಸಿ. ಕೊನೆಯದಾಗಿ ಫೇಸಿಂಗನ್ನು ಬಟ್ಟೆಯಿಂದ ಕತ್ತರಿಸಿ.ಎಲ್ಲವನ್ನು ಒಟ್ಟಿಗೆ ಇಡಿ.ನಿಮ್ಮ ಎಲ್ಲಾ ಕಟ್ ಮಾಡಿರುವ ಪೀಸ್ ಗಳು ನೋಡಲು ಹೀಗೆ ಕಾಣಬೇಕು.














ನಂತರ, ಮಿಕ್ಕಿರುವ ಬಟ್ಟೆಯನ್ನು ಮತ್ತು ಫುಲ್ ಲೆಂತ್ ರೂಲರನ್ನು ತೆಗೆದುಕೊಳ್ಳಿ ರೂಲರನ್ನು ೪೫ ಡಿಗ್ರಿಯಲ್ಲಿಟ್ಟು ನೇರವಾದ ಗೆರೆಯನ್ನು ಟುಟೋರಿಯಲ್ಲಿನಲ್ಲಿ ತೋರಿಸಿರುವಂತೆ ಮಾರ್ಕ್ ಮಾಡಿ. ಈ ನೇರವಾದ ಗೆರೆಯಿಂದ ಒಂದು ಕಾಲು ಇಂಚು ಮೆಶರಿಂಗ್ ಟೇಪ್ ಸಹಾಯದಿಂದ ಅಳತೆ ಮಾಡಿ ಮಾರ್ಕ್ ಮಾಡಿ. ಈ ಮಾರ್ಕ್ಗಳನ್ನು ನಿರಂತರವಾಗಿ ಮಾರ್ಕ್ ಮಾಡುತ್ತಾ ಇರಿ ಇದು ನೇರವಾದ ಗೆರೆ ಬರಲು ಸಹಾಯವಾಗುತ್ತದೆ. ಮಾರ್ಕ್ ಮಾಡಿರುವ ಪಾಯಿಂಟ್ ಗಳನ್ನು ಸೇರಿಸಿ. ಮಾರ್ಕ್ ಮಾಡಿರುವ ಗೆರೆಯ ಮೇಲೆ ಕತ್ತರಿಸಿ. ನಮ್ಮ ಬಯಾಸ್ ಸ್ಟ್ರಿಪ್ ತಯಾರಾಗಿದೆ.




ಈಗ ಕಾನ್ವಾಸ್ ಫ್ಯೂಸಿಂಗ್ ತೆಗೆದುಕೊಂಡು ಅರ್ಧಕ್ಕೆ ಮಡಚಿ ಶೈನಿಂಗ್ ಇರುವ ಭಾಗ ಒಂದಕ್ಕೊಂದು ನೋಡುವಂತಿರಬೇಕು. ಮತ್ತು ಕಫ್ ಟೆಂಪ್ಲೇಟನ್ನು ಅದರ ಮೇಲಿಡಿ. ನಾವು ಫ್ಯೂಸಿಂಗನ್ನು ಅರ್ಧಕ್ಕೆ ಮಡಚಿದ್ದೇವೆ ಕಫ್ಸನ್ನು ಎರಡು ಭಾಗಕ್ಕೆ ಕಟ್ ಮಾಡಬೇಕು. ಇದನ್ನು ಬಟ್ಟೆ ಮೇಲೆ ಟ್ರೇಸ್ ಮಾಡಿ. ಟ್ರೇಸ್ ಮಾಡಿರುವ ಪೀಸನ್ನು ಬಟ್ಟೆಯಿಂದ ನಿಧಾನವಾಗಿ ಕಟ್ ಮಾಡಿ ನಿಮ್ಮ ಹತ್ತಿರ ಈ ರೀತಿಯ ಎರಡು ಪೀಸ್ ಗಳು ಇರಬೇಕು. ಒಳ್ಳೆಯ ಕೆಲಸ! ನಾವು ಈಗ ಎಲ್ಲಾ ಕಟಿಂಗನ್ನು ಮುಗಿಸಿದ್ದೇವೆ.

## ಹಂತ ೨ : ಶರ್ಟಿನ ಮುಂಭಾಗವನ್ನು ಮಾಡುವುದು






ಮುಂದಿನ ಹಂತಕ್ಕೆ ಎರಡು ಮುಂಭಾಗದ ಪೀಸನ್ನು ತೆಗೆದುಕೊಳ್ಳಿ ಮತ್ತು ಎರಡು ಫೇಸಿಂಗ್ ಸ್ಟ್ರಿಪನ್ನು ಕಟ್ ಮಾಡಬೇಕು. ಫೇಸಿಂಗ್ ಸ್ಟ್ರಿಪನ್ನು ಶರ್ಟಿನ ಓಪೆನಿಂಗ್ ಭಾಗದಲ್ಲಿ ಹೊಲೆಯಬೇಕು. ಇದನ್ನು ಮಾಡಲು ಅದನ್ನು ಊಷ ಜನೋಮ್ ಅಲ್ಯೂರ್ ಡಿ ಎಲ್ ಎಕ್ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ. ಫೇಸಿಂಗ್ ಸ್ಟ್ರಿಪನ್ನು ತಪ್ಪಾದ ಭಾಗವನ್ನು ಮೊಂಭಾಗದ ಮೇಲ್ಭಾಗದಲ್ಲಿಡಿ. ಮುಂಭಾಗವನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಬಲ ಭಾಗ ಮೇಲೆ ಬರುವಂತೆ ಇರಬೇಕು. ಹೊಲೆಯುವ ಮೊದಲು ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು A ಮತ್ತು ಹೊಲಿಗೆಯ ಉದ್ದವನ್ನು ೨.೫ ಗೆ ಇದೆಯೇ ನೋಡಿಕೊಂಡು ಹೊಲೆಯಲು ಪ್ರಾರಂಭಿಸಿ. ಶರ್ಟಿನ ಕೊನೆವರೆಗೂ ಹೊಲೆಯುತ್ತಾ ಹೋಗಿ. ಒಂದು ಜೊತೆ ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ ಇದನ್ನು ರಿವರ್ಸ್ ಸ್ಟಿಚ್ ಸೆಲೆಕ್ಟರ್ ಸಹಾಯದಿಂದ ಹೊಲಿಗೆ ಭದ್ರವಾಗಿರಿಸಲು ಮಾಡಬೇಕು.








ಇದನ್ನು ಮುಗಿಸಿದ ಮೇಲೆ, ಫೇಸಿಂಗ್ ಸ್ಟ್ರಿಪನ್ನು ಪೂರ್ತಿಯಾಗದೆ ಇರುವ ಕಡೆಯಿಂದ ತೆಗೆಯಿರಿ ಮತ್ತು ಅದನ್ನು ಅರ್ಧಕ್ಕೆ ಬಲಭಾಗಕ್ಕೆ ಟುಟೋರಿಯಲ್ಲಿನಲ್ಲಿ ತೋರಿಸಿರುವಂತೆ ಮಡಚಿ. ಈಗ ಮಡಕೆಯನ್ನು ತೆಗೆದುಕೊಂಡು ಅದನ್ನು ಸೀಮ್ ಲೈನ್ ಮೇಲೆ ಇಡಬೇಕು. ನಾವು ಈ ಫೋಲಿನ ಮೇಲೆ ಈಗ ಹೊಲೆಯುತ್ತೇವೆ. ಫೋಲ್ಡ್ ೧.೫ ಇಂಚು ಅಳತೆಯದ್ದಾಗಿದೆ. ಮುಕ್ತಾಯವಾದ ಹೊಲಿಗೆ ನೋಡಲು ಹೀಗೆ ಕಾಣಬೇಕು. ಅಚ್ಚುಕಟ್ಟಾದ ಫಿನಿಷಿಂಗಿಗೆ ಹೆಚ್ಚಾದ ಬಟ್ಟೆಯನ್ನು ಮತ್ತು ದಾರವನ್ನು ಕತ್ತರಿಸಿ. ಈಗ ಮುಂಭಾಗದ ಪೀಸಿನ ಎಡಭಾಗದ ಪೀಸನ್ನು ತೆಗೆದುಕೊಳ್ಳಿ ಫೇಸಿಂಗ್ ಸ್ಟ್ರಿಪನ್ನು ಬಟ್ಟೆಯ ಬಲಭಾಗಕ್ಕೆ ಟುಟೋರಿಯಲ್ಲಿನಲ್ಲಿ ತೋರಿಸಿರುವಂತೆ ಮ್ಯಾಚ್ ಮಾಡಿ ಮತ್ತು ಅದನ್ನು ಜಾಗದಲ್ಲಿ ಹೊಲೆಯಿರಿ. ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಕಲು ಮರೆಯಬೇಡಿ ಮತ್ತು ಬಟ್ಟೆಯ ಕೊನೆ ಬರುವವರೆಗೂ ನೇರ ಹೊಲಿಗೆಯನ್ನು ಮುಂದುವರಿಸಿ.









ಇದನ್ನು ಮುಗಿಸಿದ ಮೇಲೆ ಫೇಸಿಂಗ್ ಸ್ಟ್ರಿಪನ್ನು ತಿರುಗಿಸಿ ಮತ್ತು ತೆರೆಯಿರಿ ಹಾಗೂ ತೋರಿಸಿರುವಂತೆ ಕ್ರೀಸ್ ಮಾಡಿ. ಈಗ ಬಟ್ಟೆಯನ್ನು ತಿರುಗಿಸಿ ಪೇಸಿಂಗ್ ಸ್ಟ್ರಿಪನ್ನು ಅರ್ಧದ ವರೆಗೂ ಮಡಚಿ ಫೋಲ್ಡ್ ಮೇಲೆ ನಿಧಾನವಾಗಿ ಒತ್ತಿ ಅದನ್ನು ಕ್ರೀಸ್ ಮಾಡಿ. ಈಗ ಪೂರ್ತಿ ಸ್ಟ್ರಿಪನ್ನು ತೋರಿಸಿರುವಂತೆ ಸೀಮ್ ಲೈನಿನವರೆಗೂ ಮಡಚಿ. ನಾವು ಸೀಮ್ ಲೈನಿನ ಮೇಲೆ ಹೊಲೆಯುತ್ತೇವೆ. ಪ್ರೆಸ್ಸರ್ ಫುಟಿನ ಕೆಳಗೆ ಎಡ್ಜನ್ನು ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಬಟ್ಟೆಯ ಕೊನೆವರೆಗೂ ಹೊಲೆಯುತ್ತಾ ಹೋಗಿ ಮತ್ತು ರಿವರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹಾಕಲು ಮರೆಯಬೇಡಿ. ಇದು ಮುಗಿದ ಮೇಲೆ ನಿಮ್ಮ ಹೊಲಿಗೆಗಳು ಹೀಗೆ ಕಾಣಬೇಕು. ನೀವು ನೋಡಬಹುದು ಮುಂಭಾಗದ ಫೇಸಿಂಗ್ ಬಲಭಾಗದ ಪೀಸ್ ಬಟ್ಟೆಯ ಬಲಭಾಗದಲ್ಲಿದೆ ಮತ್ತು ಶರ್ಟಿನ ಎಡಭಾಗ ಹಿಂಭಾಗದಲ್ಲಿದೆ. ಇದು ಹೀಗೆ ಮುಂಭಾಗ ಮತ್ತು ಹಿಂಭಾಗದಲ್ಲಿ ಹೀಗೆ ಕಾಣಬೇಕು.























## ಹಂತ ೩ : ಮುಂಭಾಗ ಮತ್ತು ಹಿಂಭಾಗವನ್ನು ಒಟ್ಟಿಗೆ ಸೇರಿಸಿ ಭುಜದ ಭಾಗವನ್ನು ಹೊಲೆಯುವುದರೊಂದಿಗೆ ನೆಕ್ ಲೈನನ್ನು ಮುಗಿಸುವುದು.

ಈಗ ಶರ್ಟಿನ ಹಿಂಭಾಗದ ಪೀಸನ್ನು ಎರಡು ಮುಂಭಾಗದ ಪೀಸ್ ಮೇಲೆ ಇಡಬೇಕು.ಈಗ ನಾವು ಭುಜಗಳನ್ನು ಹೊಲೆದು ಮತ್ತು ಕತ್ತಿನ ಭಾಗವನ್ನು ಬಯಾಸ್ ಸ್ಟ್ರಿಪಿನೊಂದಿಗೆ ಹೊಲೆಯೋಣ.
ಪೀಸ್ ಗಳನ್ನು ನಿಮ್ಮ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ ಮೊದಲು ಭುಜದ ಭಾಗವನ್ನು ಹೊಲೆಯೋಣ.ಅದನ್ನು ಹಿಂಭಾಗ ಹಿಂಭಾಗವನ್ನು ನೋಡುವಂತೆ ಇಟ್ಟು ಹೊಲೆಯಲು ಪ್ರಾರಂಭಿಸಿ.ಇದನ್ನು ಮುಗಿಸಿದ ಮೇಲೆ ೧/೮ ಇಂಚು ಸೀಮ್ ಅಲೋಯನ್ಸನ್ನು ಮೇಲಿನಿಂದ ಕಟ್ ಮಾಡಿ.ಹುಷಾರಾಗಿ ಕತ್ತರಿಸಿ ಹೊಲಿಗೆಯ ಮೇಲೆ ಕತ್ತರಿಸಬಾರದು.ಈಗ ಶರ್ಟನ್ನು ತೆರೆದು ಸ್ಟಿಚ್ ಲೈನನ್ನು ಕೈ ಬೆರಳಿನ ಸಹಾಯದಿಂದ ಕ್ರೀಸ್ ಮಾಡಿ.ಈಗ ಟುಟೋರಿಯಲಿನಲ್ಲಿ ತೋರಿಸಿದಂತೆ ಮಡಚಿ ಈ ಮಡಚಿರುವುದರ ಮೇಲೆ ಹೊಲೆಯೋಣ.ನಾವು ಫ್ರೆಂಚ್ ಸೀಮನ್ನು ಮಡುತ್ತಿದ್ದೇವೆ ಇದನ್ನು ಮುಗಿಸಿದ ಮೇಲೆ ತಿರುಗಿಸಿ ಓಪೆನ್ ಮಾಡಿ ನಿಧಾನವಾಗಿ ಕ್ರೀಸನ್ನು ಪ್ರೆಸ್ ಮಾಡಿ.ನಾವೀಗ ಸ್ಟಿಚಸನ್ನು ಮತ್ತೆ ಟುಟೋರಿಯಲಿನಲ್ಲಿ ತೋರಿಸಿರುವಂತೆ ಮಡಚಿ ಅದರ ಮೇಲೆ ಹೊಲೆಯಬೇಕು.ಇದನ್ನು ಮುಗಿಸಿದ ಮೇಲೆ ಬಟ್ಟೆಯನ್ನು ತೆರೆದು ಬಲಭಾಗ ಬಲಭಾಗವನ್ನು ನೋಡುವಂತೆ ಮತ್ತು ನಾವು ಎಡ್ಜ್ ಸ್ಟಿಚನ್ನು ಜಾಯಿನಿಂಗಲ್ಲಿ ಹಾಕಬೇಕು. ಬಟ್ಟೆಯನ್ನು ಪ್ರೆಸ್ಸರ್ ಪುತಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ ಮತ್ತು ಇದನ್ನೇ ಇನ್ನೊಂದು ಭುಜದ ಭಾಗಕ್ಕೂ ಪುನರಾವರ್ತಿಸಿ. ಈ ಹಂತವನ್ನು ಬೇಕಿದ್ದರೆ ಮತ್ತೊಮ್ಮೆ ನೋಡಿ.

ಒಮ್ಮೆ ಭುಜ ಹೊಲೆದ ಮೇಲೆ, ಕತ್ತಿನ ಭಾಗದ ಕೆಲಸವನ್ನು ಮಾಡುವುದು ನಮ್ಮ ಪಟ್ಟಿಯಲ್ಲಿನ ಮುಂದಿನ ಕೆಲಸ. ಬಯಾಸ್ ಸ್ಟ್ರಿಪನ್ನು ತೆರೆದು ಅದನ್ನು ಕಟ್ ಮಾಡಿ ಅರ್ಧಕ್ಕೆ ಮಡಚಿ ಅದನ್ನು ನೆಕ್ ಲೈನಿನ ಬಲಭಾಗಕ್ಕೆ ಅಲೈನ್ ಮಾಡಿ. ಪ್ರಾರಂಭದಲ್ಲಿ ಸ್ಟ್ರಿಪನ್ನು ಮಡಚಿರುವ ಭಾಗದಿಂದ ಅರ್ಧ ಇಂಚು ಬಿಟ್ಟು ಕಟ್ ಮಾಡಿ. ಹೆಚ್ಚಾಗಿರುವ ಸ್ಟ್ರಿಪನ್ನು ಒಳಕ್ಕೆ ಮಡಚಿ, ಈಗ ಬಯಾಸ್ ಸ್ಟ್ರಿಪನ್ನು ನೆಕ್ ಲೈನಿಗೆ ಹೊಲೆಯೋಣ. ಸ್ಟ್ರಿಪನ್ನು ಮತ್ತು ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ, ಹೊಲೆಯುತ್ತಿರುವಾಗ ಬಯಾಸ್ ಸ್ಟ್ರಿಪ್ಪನ್ನು ಹೊಂದಿಸುತ್ತಾ ಹೋಗಿ. ಕೊನೆಯನ್ನು ತಲುಪಿದಾಗ ಹೆಚ್ಚಾದ ೧/೨ ಇಂಚು ಬಯಾಸ್ ಸ್ಟ್ರಿಪನ್ನು ಒಳಕ್ಕೆ ಮಡಚಿ ಅದರ ಮೇಲೆ ಹೊಲೆಯಿರಿ. ರಿವರ್ಸ್ ಹೊಲಿಗೆಯನ್ನು ಹೊಲಿಗೆಯನ್ನು ಭದ್ರಗೋಳಿಸಲು ಹಾಕಬೇಕು.

ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ಚಿವು ನೋಡಬಹುದು ನಮ್ಮ ಹತ್ರ ಹೆಚ್ಚಾದ ಸೀಮ್ ಅಲೋಯನ್ಸ್ ಮೇಲ್ಭಾಗದಲ್ಲಿದೆ ನಾವು ಅದನ್ನು ಕಟ್ ಮಾಡಬೇಕು. ಹೊಲಿಗೆಯನ್ನು ಕಟ್ ಮಾಡದಂತೆ ಎಚ್ಚರವಹಿಸಿ. ಇದನ್ನು ಮುಗಿಸಿದ ಮೇಲೆ ನಾವು ಹೊಲಿಗೆಯ ಸುತ್ತಲೂ ಪಾಯಿಂಟೆಡ್ ಸೆಕ್ಷನಿನ ಮೇಲೆ ಟುಟೋರಿಯಲಿನಲ್ಲಿ ತೋರಿಸಿರುವಂತೆ , ಹೊಲೆಯಲು ಪ್ರಾರಂಭಿಸಿ ಇನ್ನೊಂದು ತುದಿ ತಲಪುವವರೆಗೂ ಹೊಲೆಯಿರಿ. ಅಚ್ಚುಕಟ್ಟಾದ ನೋಟಕ್ಕೆ ಹೆಚ್ಚಾದ ದಾರವನ್ನು ಕತ್ತರಿಸಿ.ಈಗಲೇ ಇದು ಮುಗಿದಿಲ್ಲಾ, ನಾವು ಮತ್ತೆ ಸ್ಟ್ರಿಪನ್ನು ತಪ್ಪಾದ ಭಾಗದಲ್ಲಿ ಮಡಚಿ ಟುಟೋರಿಯಲಿನಲ್ಲಿ ತೋರಿಸಿರುವಂತೆ ಅದರ ಮೇಲೆ ಹೊಲೆಯಿರಿ. ಎಡ್ಜನ್ನು ಪ್ರೆಸ್ಸರ್ ಪುಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ನಿಧಾನವಾಗಿ ಇನ್ನೊಂದು ತುದಿಯವರೆಗೂ ಹೊಲೆಯಿರಿ.





ಈಗ ಮುಗಿಯಿತು. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು.ನಿಮಗೆ ಕಾಣುವ ಹೆಚ್ಚಾದ ದಾರವನ್ನು ಕತ್ತರಿಸಿ.

ಈಗ ಮತ್ತೆ ಕಟಿಂಗ್ ಬೋರ್ಡಿನ ಕಡೆ ಹೋಗೋಣ, ನೀವು ನೋಡಬಹುದು ನಾವು ಭುಜದ ಭಾಗ ಮತ್ತು ನೆಕ್ ಲೈನನ್ನು ಹೊಲೆದಿದ್ದೇವೆ. ಇದು ಅಚ್ಚುಕಟ್ಟಾಗಿ ಕಾಣುತ್ತಿದೆಯಲ್ಲವೇ?

## ಹಂತ ೪ : ಸ್ಲೀವ್ಸನ್ನು ತಯಾರಿಸುವುದು




ಮುಂದೆ, ನಾವು ಸ್ಲೀವಿನ ಕೆಲಸ ಮಾಡೋಣ. ಸ್ಲೀವ್ ಕಟ್ ಮಾಡಿರುವ ಪೀಸನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಮಡಚಿ.ಇದು ನಮ್ಮ ಬಲಭಾಗದ ತೋಳು ಮತ್ತು ಇದು ಎಡಭಾಗದ್ದು, ಈಗ ನಾವು ಎಡಭಾಗದ ತೋಳನ್ನು ಮೊದಲು ಕೆಲಸ ಮಾಡೋಣ.










ಸ್ಲೀವನ್ನು ತೆರೆದು ಬಲಭಾಗ ಮೇಲೆ ಬರುವಂತೆ ಡ್ರಾಯಿಂಗ್ ಬೋರ್ಡಿನ ಮೇಲೆ ಇಡಬೇಕು. ಸ್ಲಿಟ್ ಇರುವ ಕಡೆ ನಾವು ಪ್ಲಾಕೆಟ್ ಸ್ಟ್ರಿಪನ್ನು ಸೇರಿಸಬೇಕು. ಪ್ಲಾಕೆಟಿನ ಸಣ್ಣ ಸ್ಟ್ರಿಪ್ ಬಟ್ಟೆಯ ಬಲಭಾಗಕ್ಕೆ ಹೋಗುತ್ತದೆ. ಅದನ್ನು ಭದ್ರವಾಗಿಸಲು ತೋರಿಸಿರುವಂತೆ ಪಿನ್ ಮಾಡಿ. ಉದ್ದವಾದ ಪ್ಲಾಕೆಟ್ ಸ್ಟ್ರಿಪನ್ನು ಬಟ್ಟೆಯ ಹಿಂಭಾಗಕ್ಕೆ ಹೊಲೆಯಬೇಕು. ಉದ್ದವಾದ ಪ್ಲಾಕೆಟ್ ಸ್ಟ್ರಿಪಿನ ಎಡ್ಜಸ್ಸನ್ನು ತೋಳಿಗೆ ಮ್ಯಾಚ್ ಮಾಡಿ ಪಿನ್ ಮಾಡಿ. ಈಗ ಸ್ಟ್ರಿಪ್ಸನ್ನು ಸ್ಲೀವಿಗೆ ಹೊಲೆಯೋಣ, ಮೊದಲು ಚಿಕ್ಕ ಪ್ಲಾಕೆಟನ್ನು ಬಟ್ಟೆಗೆ ಹೊಲೆಯೋಣ, ಪಿನ್ನಳನ್ನು ತೆರೆದು ಹೊಲೆಯಲು ಪ್ರಾರಂಭಿಸಿ ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ.ಇದನ್ನು ಮುಗಿಸಿದ ಮೇಲೆ ಸ್ಟ್ರಿಪನ್ನು ತಿರುಗಿಸಿ ಅದನ್ನು ನಿಧಾನವಾಗಿ ಸೀಮ್ ಲೈನನ್ನು ಕ್ರೀಸ್ ಮಾಡಿ.ನಂತರ ಬಟ್ಟೆಯನ್ನು ತಿರುಗಿಸಿ ಸ್ಟ್ರಿಪನ್ನು ಬಟ್ಟೆಯ ಹಿಂಭಾಗಕ್ಕೆಇಡಬೇಕು. ಅದನ್ನು ಅರ್ಧಕ್ಕೆ ಮತ್ತೆ ಮಡಚಿ ಮಡಕೆಯನ್ನು ಕ್ರೀಸ್ ಮಾಡಿ. ಈಗ ಫೋಲ್ಡನ್ನು ತೆಗೆದುಕೊಂಡು ಅದನ್ನು ತೋರಿಸಿರುವಂತೆ ಸ್ಟಿಚ್ ಲೈನ್ ಮೇಲೆ ಇಡಬೇಕು. ಈಗ ಅದರ ಮೇಲೆ ಹೊಲೆಯಿರಿ ಇದನ್ನು ಮುಗಿಸಿದ ಮೇಲೆ ನಾವು ಇನ್ನೊಂದು ಪ್ಲಾಕೆಟನ್ನು ತೋಳಿಗೆ ಹೊಲೆಯಬೇಕು.ಪಿನ್ ಹಾಕಿರವ ಭಾಗವನ್ನು ಹೊಲೆಯುತ್ತಾ ಪಿನ್ನನ್ನು ತೆಗೆಯುತ್ತಾ ಹೋಗಿ.




ನಾವು ಇದೇ ವಿಧಾನವನ್ನು ಇನ್ನೊಂದು ತೋಳಿಗೂ ಅನುಸರಿಸಬೇಕು. ನಾವು ಎರಡೂ ಪ್ಲಾಕೆಟ್ ಪೀಸನ್ನೂ ಸ್ಲೀವ್ಸಿಗೆ ಸೇರಿಸಬೇಕು.




ನಿಮ್ಮ ಅಂತಿಮ ಹೊಲಿಗೆ ನೋದಲು ಹೀಗೆ ಕಾಣಬೇಕು. ನಂತರ ಐರನನ್ನು ತಂದು ಸೇರಿಸಿರುವ ಪ್ಲಾಕೆಟ್ ಮೇಲೆ ಐರನ್ ಮಾಡಬೇಕು. ಉದ್ದವದ ಪ್ಲಾಕೆಟ್ ಸ್ಟ್ರಿಪನ್ನು ತೆಗೆದುಕೊಂಡು ಅದನ್ನು ತಿರುಗಿಸಿ ತೆರೆಯಿರಿ, ಹೊಲೆಯದೆ ಇರುವ ಭಾಗದಲ್ಲಿ ೧/೪ ಮಡಚಿ ಫೋಲ್ಡನ್ನು ಕಾಪಾಡಲು ಅದರ ಮೇಲೆ ಐರನ್ ಮಾಡಿ. ನಂತರ ಸ್ಟ್ರಿಪನ್ನು ಮಡಚಿ ಮಡಚಿರುವ ಭಾಗ ಹೊಲಿಗೆಯ ಮೇಲೆ ಬರಬೇಕು. ಐರನ್ ಮಾಡಿ. ಇದಾದ ಮೇಲೆ ಪ್ಲಾಕೆಟನ್ನು ೧/೪ ಇಂಚು ಮೇಲ್ಭಾಗದ ತುದಿಯಿಂದ ಟುಟೋರಿಯಲಿನಲ್ಲಿ ತೋರಿಸಿರುವಂತೆ ಮತ್ತೆ ಐರನ್ ಮಾಡಿ ಮಡಕೆಯನ್ನು ಭದ್ರ ಮಾಡಿ.





ಮತ್ತೆ ಮೇಲ್ಭಾಗದಿಂದ ಐರನ್ ಮಾಡಿ ತ್ರಿಕೋನಾಕಾರ ಬರುವಂತೆ ಐರನ್ ಮಾಡಿ.








ಈ ಹೊಲಿಗೆಗಳು ಮುಗಿದ ಮೇಲೆ, ನಾವು ಹೊಲಿಗೆಗಳನ್ನು ಪ್ಲಾಕೆಟ್ ಮೇಲೆ ಟುಟೋರಿಯಲಿನಲ್ಲಿ ತೋರಿಸಿರುವಂತೆ ಟಾಕಿಂಗ್ ಮಾಡಬೇಕು. ಸ್ಲಿಟ್ ಓಪೆನಿಂಗ್ ಮೇಲೆ ಹೊಲೆಯಬಾರದು ನೆನೆಪಿರಲಿ ಮತ್ತು ಅಲ್ಲಿ ತಲುಪಿದಾಗ ಹೊಲಿಗೆಯನ್ನು ನಿಲ್ಲಿಸಿ. ನಾವೀಗ ಟಾಕಿಂಗ್ ಹೊಲಿಗೆಯ ಮೇಲೆ ಹೊಲೆಯುತ್ತೇವೆ. ನೀವು ತುದಿಯನ್ನು ತಲುಪಿದಾಗ ಪಿವಟ್ ಟೆಕ್ನಿಕನ್ನು ಬಳಸಿ ಇದು ಪೂರ್ತಿಯಾಗಿ ಒಂದೇ ಹೊಲಿಗೆ ಬರುತ್ತದೆ. ಒಂದು ಸಮಾನಾಂತರವಾದ ಹೊಲಿಗೆಯನ್ನು ೧/೨ ಇಂಚು ದೂರದಲ್ಲಿ ಹಾಕಿ ಬಾಕನ್ನು ಪೂರ್ತಿಗೊಳಿಸಿ. ಇದನ್ನು ಮುಗಿಸಿದ ಮೇಲೆ ಟಾಕಿಂಗ್ ಹೊಲಿಗೆಯನ್ನು ಕತ್ತರಿಸಿ. ಮೇನ್ ಹೊಲಿಗೆಗಳು ಕತ್ತರಿಸದಂತೆ ಎಚ್ಚರವಹಿಸಿ, ನಾವು ಮೇನ್ ಸ್ಟಿಚಸನ್ನು ಕಟ್ ಮಾಡಬಾರದು. ನಿಮ್ಮ ಅಂತಿಮ ಹೋಲಿಗೆ ನೋಡಲು ಹೀಗೆ ಕಾಣಬೇಕು.



ಈಗ ನಾವು ಕಫನ್ನು ಜೋಡಿಸುವುದನ್ನು ಶುರು ಮಾಡೋಣ. ಒಂದು ಕಫ್ ಪೀಸನ್ನು ಅದರ ಫ್ಯೂಸಿಂಗ್ ಜೊತೆಗೆ ತೆಗೆದುಕೊಳ್ಳೋಣ. ಕಫ್ ಪೀಸನ್ನು ತೆರೆದು ಫ್ಯೂಸಿಂಗ್ ಮಟೀರಿಯಲನ್ನು ರಿವೆರ್ಸ್ ಭಾಗದಲ್ಲಿ ಇಟ್ಟು ಐರನ್ ಮಾಡಿ. ಫ್ಯೂಸಿಂಗ್ ಮಟೀರಿಯಲ್ ಅಂಟಿಕೊಂಡ ಮೇಲೆಕಫ್ಸನ್ನು ಫ್ಯೂಸಿಂಗ್ ಮೇಲೆ ಬರುವಂತೆ ಮಡಚಿ






ನಾವು ಟುಟೋರಿಯಲಿನಲ್ಲಿ ತೋರಿಸಿರುವಂತೆ ಲಂಬವಾದ ಹೊಲಿಗೆಯನ್ನು ಹಾಕಬೇಕು. ಕಫ್ಸಿನ ಎಡ್ಜನ್ನು ಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಇದನ್ನು ನೀವು ಮುಗಿಸಿದ ಮೇಲೆ ಹೆಚ್ಚಾದ ಸೀಮ್ ಅಲೋಯನನ್ನು ಕತ್ತರಿಸಿ. ಈಗ ಹೊಲೆಯದೆ ಇರುವ ಭಾಗ, ಫ್ಯೂಸಿಂಗ್ ಸ್ಟ್ರಿಪಿನ ಒಂದು ಕಡೆ ಟುಟೋರಿಯಲಿನಲ್ಲಿ ತೋರಿಸಿರುವಂತೆ ಮಡಚಿ ಅದರ ಮೇಲೆ ಹೊಲೆಯಿರಿ. ಹೆಚ್ಚಾದ ದಾರವನ್ನು ಕತ್ತರಿಸಿ.










ನೀವು ನೋಡಬಹುದು ನಾವು ಒಂದು ಕಡೆ ಹೊಲೆದಿದ್ದೇವೆ. ಬಟ್ಟೆಯನ್ನು ಒಳಗಿನಿಂದ ಹೊರಕ್ಕೆ ಫ್ಯೂಸಿಂಗ್ ಹೊರಕ್ಕೆ ಹೋಗುವಂತೆ ತಿರುಗಿಸಿ. ಎಡ್ಜಸನ್ನು ತಿರುಗಿಸಿ ಅದನ್ನು ಪಕ್ಕಕಿಡಿ.ಮುಂದೆ, ನಾವು ತೋಳಿನ ಬಟ್ಟೆಯನ್ನು ತೆಗೆದುಕೊಂಡು ಅದನ್ನು ಅರ್ಧಕ್ಕೆ ಮಡಚಬೇಕು, ಬಲಭಾಗ ಬಲಭಾಗವನ್ನು ನೋಡುವಂತೆ ಇಟ್ಟು ಓಪೆನ್ ಆಗಿರುವ ಭಾಗವನ್ನು ಪಿನ್ ಮಾಡಬೇಲು. ನಾವು ಸ್ಲೀವ್ ಸೇಮ್ ಅಲೂಯನ್ಸನ್ನು ಅರ್ಶ ಭಾಗಕ್ಕೆ ಹೊಲೆಯಬೇಕು ನಮ್ಮ ಪೀಸ್ ಗಳನ್ನು ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗೋಣ, ಸ್ಲೀವಿನ ಸೈಡ್ ಸೀಮ್ಸನ್ನು ಮ್ಯಾಚ್ ಮಾಡಿ ಪ್ರೆಸ್ಸರ್ ಫ್ರೂಟಿನ ಕೆಳಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ. ಹೆಚ್ಚಾದ ದಾರವನ್ನು ಕತ್ತರಿಸಿ, ತೋಳನ್ನು ಒಳಗಿನಿಂದ ಹೊರಕ್ಕೆ ತಿರುಗಿಸಿ, ಈಗ ಬಹು ಮುಖ್ಯವಾದ ಹಂತ, ಕಫ್ಸನ್ನು ಸೇರಿಸುವುದು, ಹೆಚ್ಚು ಗಮನವಹಿಸಿ!








ಸ್ಲೀವಿನ ಎಡ್ಜಿನಿಂದ ನಾವು ಉದ್ದದ ಪ್ಲಾಕೆಟ್ ಸೇರಿಸಿರುವ ಕಡೆಯಿಂದ ೧ ೧/೨ ಇಂಚು ಅಳತೆ ಮಾಡಿ ಮಾರ್ಕ್ ಮಾಡಿ. ಈಗ ೯೧/೪ ಇಂಚು ಸ್ಲೀವಿನ ಓಪೆನಿಂಗಿನಿಂದ ಅಳತೆಮಾಡಿ.ಚಿಕ್ಕ ಪ್ಲಾಕೆಟ್ ಸೇರಿಸಿರುವ ಕಡೆಯಿಂದ ದೊಡ್ಡ ಪ್ಲಾಕೆಟಿನವರೆಗೂ ಅಳತೆ ಮಾಡಿ. ಇಲ್ಲಿ ಹೇಳಿರುವ ಪಾಯಿಂಟ್ ೯ ೧/೪. ಈಗ ಮಿಕ್ಕಿರುವ ಭಾಗ ೨ ೧/೪ ಇಂಚು ನೆರಿಗೆಗೆ ಹೋಗುತ್ತದೆ. ಆದರಿಂದ ಮೊದಲು ಮಾರ್ಕ್ ಮಾಡಿರುವ ಪಾಯಿಂಟಿನಿಂದ ೨ ೧/೪ ಇಂಚು ಮಾರ್ಕ್ ಮಾಡಿ. ಈಗ ಈ ಎರಡು ಪಾಯಿಂಟಿನಿಂದ ಮಧ್ಯಭಾಗವನ್ನು ತೆಗೆದುಕೊಂಡು ಪಯಿಂಟನ್ನು ಮಾರ್ಕ್ ಮಾಡಿ. ಮೊದಲ ಮಾರ್ಕಿನಲ್ಲಿ ಹಿಂಡಿ ನಂತರ ಮಧ್ಯದ ಮಾರ್ಕನ್ನು ಮಡಚಿ ಮತ್ತು ಹಿಂಡಿರುವ ಬಟ್ಟೆಯನ್ನು ಮೂರನೇ ಮಾರ್ಕಿನ ಮೇಲೆ ಇಡಬೇಕು. ಈಗ ನೆರಿಗೆಯನ್ನು ಜಾಗದಲ್ಲಿ ಪಿನ್ ಮಾಡೋಣ. ಇದು ಅಳತೆಗಳು ಸರಿಯಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಅಷ್ಟೇ. ಈಗ ಮತ್ತೊಮ್ಮೆ ಸ್ಲೀವಿನ ಅಳತೆಯನ್ನು ಮಾಡಿ. ಇದು ೯ ೧/೪ ಈಂಚು. ಈಗ ನಾವು ಒಂದು ಸಣ್ಣ ಹೊಲಿಗೆಯನ್ನು ನೆರಿಗೆಯ ಮೇಲೆ ತೋರಿಸಿರುವಂತೆ ಹಾಕೋಣ.







ಹೊಲೆದಿರುವ ಸ್ಲೀವನ್ನು ಕಫಿನ ಒಳಕ್ಕೆ ಹಾಕಿ ಟಾಪನ್ನು ಹೊಲೆಯಿರಿ. ಸ್ಲೀವನ್ನು ಮತ್ತು ಕಫ್ಸನ್ನು ಹೊಲೆಯುವಾಗ ಹೊಂದಿಸುತ್ತಾ ಹೋಗಿ. ನಾವೀಗ ಕಫ್ಸಿನ ಸುತ್ತಲೂ ಹೊಲೆಯುತ್ತೇವೆ. ಕಫ್ಸಿನ ಎಡ್ಜನ್ನು ಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ಇದೇ ವಿಧಾನವನ್ನು ಇನ್ನೊಂದು ಸ್ಲೀವಿಗೂ ಮಾಡಬೇಕು. ನೀವು ನೋಡುವಂತೆ, ನಾವು ಪ್ಲಾಕೆಟ್ ಮತ್ತು ಕಫ್ಸನ್ನು ಸ್ಲೀವಿಗೆ ಸೇಮಿಲ್ಲದೆ ಸೇರಿಸಿದ್ದೇವೆ, ನೆರಿಗೆಯೂ ಕೂಡ ಆರಾಮದಾಯಕವಾಗಿ  ಹೊರಬರದೆ ಕೂತಿದೆ.






















## ಹಂತ ೫ : ಸ್ಲೀವನ್ನು ಸೇರಿಸಿ ಸೈಡ್ ಸೀಮ್ಸನ್ನು ಮುಗಿಸಿ ಬಾಟಮನ್ನು ಹೆಮ್ ಮಾಡುವುದು

ನೀವು ಕಾಣುವಂತೆ ನಾವು ಸ್ಲೀವನ್ನು ಸೇರಿಸಿದೇವೆ. ತೋರಿಸಿರುವಂತೆ ಶರ್ಟನ್ನು ತಿರುಗಿಸಿ ತೆರೆಯಿರಿ. ಸ್ಲೀವ್ಸನ್ನು ತೆಗೆದು ಕೊಂಡು ಅರ್ಧಕ್ಕೆ ಮಡಚಿ. ಅರ್ಧದಲ್ಲಿ ಕತ್ತರಿಯಿಂದ ನಾಚನ್ನು ಮಾಡಿ. ಈ ನಾಚನ್ನು ಶರ್ಟಿನ ಮಧ್ಯಕ್ಕೆ ಭುಜದ ಭಾಗಕ್ಕೆ ಮ್ಯಾಚ್ ಮಾಡಿ ಪಿನ್ ಮಾಡಿ. ಬಲಭಾಗ ಬಲಭಾಗವನ್ನು ನೋಡುವಂತಿದೆಯೇ ನೋಡಿಕೊಳ್ಳಿ, ಹೊಲೆಯಲು ಸುಲಭವಾಗುವಂತೆ ಸ್ಲೀವಿನ ಎಲ್ಲಾ ಕಡೆ ಪಿನ್ ಮಾಡಿ. ಇದೇ ವಿಧಾನ ಇನ್ನೊಂದು ಸ್ಲೀವಿಗೂ ಮಾಡಬೇಕು. ಶರ್ಟನ್ನಿ ತಿರುಗಿಸಿ ತೆರೆಯಿರಿ ಮಧ್ಯಭಾಗವನ್ನು ಮಾರ್ಕ್ ಮಾಡಿ, ಪಿನ್ ಮಾಡಲು ಮುಂದುವರಿಸಿ ಆರ್ಮ್ ಹೋಲ್ ಪಾರ್ಟನ್ನು ಪಿನ್ ಮಾಡಿ ಸ್ಲೀವಿನ ಭಾಗ ಮತ್ತು ಶರ್ಟಿನ ಪೀಸನ್ನು ಒಟ್ಟಿಗೆ ಪಿನ್ ಮಾಡಿ. ಆರ್ಮ್ ಹೋಲಿನ ಕೆಲಸ ಮಾಡಿದ ಮೇಲೆ, ನಾವು ಸೈಡ್ಸನ್ನು ಮ್ಯಾಚ್ ಮಾಡಿ ಶರ್ಟಿನ ಸೈಡ್ ಸೀಮ್ಸಿನ ಕೆಲಸ ಮಾಡಬೇಕು.


ನಿಮ್ಮ ಪಿನ್ ಮಾಡಿರುವ ಶರ್ತ್ ಪೀಸನ್ನು ಊಷಾ ಜನೋಮ್ ಅಲ್ಯೂರ್ ಡೆ ಎಲ್ ಎಕ್ಸ್ ಮಷೀನಿಗೆ ತೆಗೆದೊಕೊಂಡು ಹೋಗಿ. ಸ್ಲೀವಿನ ತುದಿಯನ್ನು ಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ ಹೊಲೆಯಲು ಫ್ರಾರಂಭಿಸಿ. ನಾವು ಇನ್ನೊಂದು ಕಡೆಗೆ ಹೋಗುತ್ತಾ ಪಿನ್ಗಳನ್ನು ತೆಗೆಯಬೇಕು. ನೀವು ನೋಡಬಹುದು, ನಾವು ತೋಳನ್ನು ಶರ್ಟಿಗೆ ಹೊಲೆದಿದ್ದೇವೆ, ಇದೇ ವಿಧಾನವನ್ನು ಇನ್ನೊಂದು ಕಡೆಗೂ ಮಾಡಿ. ಇದಾದ ಮೇಲೆ ನಾವು ಸೈಡ್ ಸೀಮ್ಸನ್ನು ಹೊಲೆಯೋಣ, ಸ್ಲೀವ್ಸನ್ನ ಒಟ್ಟಿಗೆ ಮ್ಯಾಚ್ ಮಾಡಿ ಮಧ್ಯಭಾಗದಿಂದ ಹೊಲೆಯಲು ಫ್ರಾರಂಭಿಸಿ ಹೆಮ್ಮಿನ ಕಡೆಗ ಹೊಲೆಯಿರಿ. ಬಟ್ಟೆಯನ್ನು ಹೊಲೆಯುವಾಗ ಹೊಂದಿಸುತ್ತಾ ಹೋಗಿ. ಇದನ್ನೇ ಇನ್ನೊಂದು ಕಡೆನೂ ಮಾಡಿ ನೀವು ನೋಡಬಹುದು ನಾವು ಸೈಡ್ ಸೀಮ್ಸನ್ನು ಮುಗಿಸಿದ್ದೇವೆ. ಆದರ ನಾವು ಇನ್ನೂ ಮುಗಿಸಿಲ್ಲಾ, ನಾವು ಸೈದ್ ಸೀಮ್ಸನ್ನು ಇನ್ನೊಮ್ಮೆ ಹೊಲೆಯಬೇಕು ಆದರೆ ಈ ಬಾರಿ ಜಿಗ್ ಜಾಗ್ ಹೊಲಿಗೆ. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು C ಮತ್ತು ಹೊಲಿಗೆಯ ಉದ್ದವನ್ನು ೧.೫ ಗೆ ಇಟ್ಟು ಹೊಲೆಯಲು ಫ್ರಾರಂಭಿಸಿ. ಈ ಹೊಲಿಗೆಗಳು ನಿಮ್ಮ ಶರ್ತಿಗೆ ಅಚ್ಚುಕಟ್ಟಾದ ನೋಟವನ್ನು ಕೊಡುತ್ತದೆ ಮತ್ತು ಫ್ರೇಯಿಂಗ್ ಎಡ್ಜ್ ಇಲ್ಲದಂತೆ ಮಾಡುತ್ತದೆ. ನೋಡಿ ಎಷ್ಟು ಸ್ವಚವಾಗಿ ಕಾಣುತ್ತಿದೆ? ಮುಂದೆ ಪಟ್ಟಿಯಲ್ಲಿ ಇರುವುದು ಶರ್ಟಿನ ಬಾಟಮನ್ನು ಹೆಮ್ಮಿಂಗ್ ಮಾಡುವುದು. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು A ಮತ್ತು ಹೊಲಿಗಯ ಉದ್ದವನ್ನ ೨.೫ಗೆ ಹಾಕಲು ಮರೆಯಬೇಡಿ. ಹೊಲೆಯುತ್ತಾ ಮಡಚುತ್ತಾ ಹೋಗಿ. ಎಲಾ ಕಡೆನೂ ಸುತ್ತಲೂ ಹೊಲೆಯಿರಿ.ಸೀಮ್ ಲೈನನ್ನು ಹೊಲೆಯುವಾಗ ಹೆಚ್ಚು ಹುಷಾರಾಗಿರ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು. ಸಾರಾಂಶ : ನಾವು ಸ್ಲೀವ್ಸನ್ನು ಶರ್ಟಿಗೆ ಸೇರಿಸಿದ್ದೇವೆ, ಸೈದ್ ಸೀಮ್ಸನ್ನು ಹೊಲೆದಿದ್ದೇವೆ ಮತ್ತು ಬಾಟಮನ್ನು ಹೆಮ್ ಮಾಡಿದ್ದೇವೆ.





## ಹಂತ ೬ : ಬಟನನ್ನು ಹಾಕುವುದು

ನಾವು ಮುಕ್ಕಾಲು ಭಾಗ ಮುಗಿಸಿದ್ದೇವೆ. ಬರೀ ಫಿನಿಷಿಂಗ್ ಟಚ್ ಮಾತ್ರ ಇರುವುದು, ಶರ್ಟನ್ನು ಒಳಗಿನಿಂದ ಹೊರಕ್ಕೆ ತಿರುಗಿಸಿ. ನಾವು ಬಟನ್ ಹೋಲನ್ನು ಎಡಭಾಗಕ್ಕೆ ಮಾಡಿ ಬಟನನ್ನು ಬಲಭಾಗಕ್ಕೆ ಹಾಕಬೇಕು.














ಮೊದಲ ಬಟನನ್ನು ಕತ್ತಿನ ಫೇಸಿಂಗಿನಲ್ಲಿ ೧ ಇಂಚು ದೂರ ಕತ್ತಿನಿಂದ ಇಟ್ಟು ಮಾರ್ಕ್ ಮಾಡಿ. ಬಟನ್ ಸ್ಟ್ರಿಪಿನ ಮಧ್ಯದಲ್ಲಿದೆಯೇ ನೋಡಿಕೊಳ್ಳಿ ಅಲ್ಲಿಂದ ೩ ೧/೨ ಇಂಚು ಅಳತೆ ಮಾಡಿ ಎರಡನೆ ಮಾರ್ಕ್ ಮಾಡಿ. ಇದನ್ನು ತುದಿಯನ್ನು ತಲಪುವವರೆಗೂ ಮಾಡಿ. ಇನ್ನೊಂದು ಕಡೆನೂ ಮಾರ್ಕಿಂಗ್ ಬಟನ್ ಹೋಲ್ಗೆ ಮಾಡಿ. ನೆಕ್ ಇಂದ ಒಂದು ಇಂಚು ಮೊದಲ ಮಾರ್ಕ್ ಮತ್ತು ೩ ೧/೪ ಇಂಚಿಗೆ ಉಳಿದ ಮಾರ್ಕ್ಗಳು.

ಸ್ಲೀವಿಗೆ ನಾವು ಮೊದಲುಕಫ್ಫಿನ ಮಧ್ಯವನ್ನು ತೆಗೆದುಕೊಳ್ಳಬೇಕು, ಕಫ್ ೨ ೧/೨ ಇಂಚು ಇದೆ ಆದ್ದರಿಂದ ಮಧ್ಯ ೧೧/೪ ಇಂಚು ಆಗುತ್ತದೆ. ಮಾರ್ಕ್ ಮಾಡಿ. ಈಗ ಕಫ್ಫಿನ ಓಪೆನ್ ಎಡ್ಜಿನಿಂದ ೧ ಇಂಚು ಒಳಕ್ಕೆ ಮಾರ್ಕ್ ಮಾಡಿ ಈ ಮಾರ್ಕಿಂಗ್ ನಮ್ಮ ಮೊದಲ ಬಟನಿನ ಜಾಗ. ಎರಡನೆ ಬಟನ್ ಅಂದಾಜು ೧.೪ ಇಂಚು ಕಫ್ ಓಪೆನಿಂಗ್ ಇಂದ ಇರಬೇಕು. ಈ ಪಾಯಿಂಟನ್ನೂ ಮಾರ್ಕ್ ಮಾಡಿ. ಬಟನ್ ಗಳು ನೋಡಲು ಹೀಗೆ ಕಾಣಬೇಕು.

ಕಫ್ಫಿನ ಮೇಲೆ ಬಟನ್ ಹೋಲ್ ಮಾಡಲು, ಕಫ್ಫಿನ ಮಧ್ಯವನ್ನು ಮಾರ್ಕ್ ಮಾಡಿ ಅದು ೧೧/೪ ಇಂಚು ಕಫ್ಫಿನ ಇನ್ನೊಂದು ಕಡೆ. ಈಗ ಮತ್ತೆ ಕ್ಫ್ ಓಪೆನಿಂಗ್ ಇಂದ ೧ ಇಂಚು ಮಾರ್ಕ್ ಮಾಡಿ. ಇದು ಬಟನ್ ಹೋಲಿನ ಜಾಗ

ನಂತರ ಹೊಲೆದಿರುವ ಪ್ಲಾಕೆಟಿನ ಮಧ್ಯಭಗವನ್ನು ಎರಡೂ ಕಡೆ ತೆಗೆದುಕೊಂಡು ಬಟನಿಗೆ ಮಾರ್ಕಿಂಗ್ ಮಾಡಿ ಮತ್ತು ಬಟನ್ ಹೋಲ್ ಕಫ್ಫಿನಿಂದ ೨ ಇಂಚು.
ಇದೇ ವಿಧಾನವನ್ನು ಇನ್ನೊಂದು ಸ್ಲೀವಿಗೂ ಮಾಡಬೇಕು. ಎಲ್ಲಾ ಮಾರ್ಕಿಂಗ್ ಮುಗಿಸಿದ ಮೇಲೆ , ಶರ್ಟನ್ನು ಹೊಲಿಗೆ ಯಂತ್ರಕ್ಕೆ ತೆಗೆದುಕೊಂಡು ಹೋಗಿ.

ಮುಂದಿನ ಹಂತಕ್ಕೆ, ರೆಗ್ಯುಲೌ ಪ್ರೆಸ್ಸರ್ ಫುಟನ್ನು ತೆಗೆದು ಬಟನ್ ಹೋಲ್ ಫುಟನ್ನು ಹಾಕಬೇಕು. ಅಸೆಸರಿ ಬಾಕ್ಸನ್ನು ತೆಗೆಯುವುದನ್ನು ಮರೆಯಬೇಡಿ ಮತ್ತು ಫೀಡ್ ಡಾಗ್ ಜಾಗವನ್ನು ಕೆಳಕ್ಕೆ ಮಾಡಿ. ಅಸೆಸರಿ ಬಾಕ್ಸನ್ನು ಮತ್ತೆ ಸೇರಿಸಿ ಈಗ ಬಟನ್ ಹೊಲೆಯಲು ತಯಾರಾಗಿದೆ. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು C ಜಿಗ್ ಜಾಗ್ ಹೊಲಿಗೆಗೆ ಮತ್ತು ಹೊಲಿಗೆಯ ಉದ್ದದ ಡಯಲ್ 0 ಮತ್ತು ೧ ರ ಮಧ್ಯದಲ್ಲಿರಬೇಕು. ಬಟನನ್ನು ಹಾಕುವುದು ನಿಮ್ಮ ಊಷಾ ಜನೋಮ್ ಅಲ್ಲೂರ್ ಡಿ ಎಲ್ ಎಕ್ಸ್ ಹೊಲಿಗೆ ಯಂತ್ರದಲ್ಲಿ ತುಂಬಾ ಸುಲಭ. ಬಟನ್ ಹೋಲ್ಸ್ ಮಾಡುವುದು ಸರಳ.

ಅಸ್ಸೆಸರಿ ಬಾಕ್ಸನ್ನು ತೆಗೆದು ಫೀಡ್ ಡಾಗ್ ಜಾಗವನ್ನು ಮೇಲಕ್ಕೆ ಮಾಡಿ. ಪಾಯಿಂಟನ್ನು ಫುಟಿನ ಕೆಳಗೆ ಇಟ್ಟು ಮಷೀನನ್ನು ಬಟಾನ್ ಹೋಲ್ ಹೊಲಿಗೆಗೆ ಸೆಟ್ ಮಾಡಿ. ಇನ್ನೂ ವಿವರವಾದ ಬಟನ್ ಮತ್ತು ಬಟನ್ ಹೋಲಿನ ಟುಟೋರಿಯಲ್ಲಿಗೆ ನಮ್ಮ ವೆಬ್ ಸೈಟ್ www.ushasew.com. ಗೆ ಭೇಟಿ ನೀಡಿ.

ಒಮ್ಮೆ ಹೋಲನ್ನು ಹೊಲೆದ ಮೇಲೆ ಸೀಮ್ ರಿಪ್ಪರನ್ನು ಬಳಸಿ ಹೋಲನ್ನು ಮಾಡಿ. ಅಷ್ಟೇ! ಎಲ್ಲಾ ಬಟನಿಗೂ ಇದೇ ವಿಧಾನವನ್ನು ಅನುಸರಿಸಿ.

ನೋಡಿ! ನಮ್ಮ ಶರ್ಟ್ ತಯಾರಾಗಿದೆ! ನಾವು ಶರ್ಟನ್ನು ಹೊಲೆದಿದೇವೆ, ಬಟನನ್ನು ಸೇರಿಸಿದ್ದೇವೆ, ಬಟನ್ ಹೋಲನ್ನು ಮಾಡಿದ್ದೇವೆ. ಆ ಹಳೆಯ ಕಾಲ ಹೋಯಿತು ನಮಗೆ ಬೇರೆ ಬೇರೆ ಮಷೀನುಗಳು ಮತ್ತು ಪರಿಣಿತರು ಬೇಕಾಗಿತ್ತು ಇವೆಲ್ಲವನ್ನು ಮಾಡಲು, ನಿಮ್ಮ ಶರ್ಟ್ ಸ್ಟೈಲಿಶಾಗಿ ಕಾಣಿಸುತ್ತಿದೆ ಅಲ್ಲವೇ?